ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560 001

ಸಿ7(8)ಪ್ರಾ.ಶಿ.ಅ/ಆರ್.ಟಿ.ಇ04/2012-13

ದಿನಾಂಕ:08-04-2013

## ಸುತ್ತೋಲೆ

**ವಿಷಯ:** ಚೈಲ್ಡ್ ಲೈನ್ 1098 ನ್ನು ಮಕ್ಕಳ ರಕ್ಷಣೆಗೆ ದಿನದ 24 ಗಂಟೆಗಳಲ್ಲಿಯೂ ಚಾಲ್ತಿಯಲ್ಲಿರುವ ದೂರವಾಣಿಯ ಮಾಹಿತಿಯನ್ನು ಸಾರ್ವಜನಿಕರು/ ವಿದ್ಯಾರ್ಥಿಗಳಿಗೆ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಪ್ರಕಟಿಸುವ ಬಗ್ಗೆ...

**ಉಲ್ಲೇಖ:** ಶ್ರೀಮತಿ ನಾಗಮಣಿ .ಸಿ.ಎನ್. ನಗರ ಸಂಘಟಕರು,ಚೈಲ್ಡ್ ಲೈನ್ ಬೆಂಗಳೂರು ಇವರ ಪತ್ರ ದಿನಾಂಕ:19-01-2013

********************

ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ದೈಹಿಕ ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆಯುತ್ತಿರುವುದು ವಿಪರ್ಯಾಸದ ಸಂಗತಿ ಯಾಗಿದೆ. ಈ ಶೋಷಣೆಯಿಂದ ಮಕ್ಕಳ ಮಾನಸಿಕ ಸ್ಥೈರ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಇಲ್ಲಿ ನೇರವಾಗಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಅನೇಕ ಬಾರಿ ಮಕ್ಕಳು ತಮ್ಮ ಮೇಲೆ ಆಗುತ್ತಿರುವ ತೊಂದರೆಗಳ ಕುರಿತು ಯಾರಿಗೆ,ಹೇಗೆ ದೂರು ಕೊಡಬೇಕು ಎಂಬ ಬಗ್ಗೆ ಮಾಹಿತಿ ಇಲ್ಲದೆ ಮಾನಸಿಕವಾಗಿ ತೊಂದರೆಗೆ ಒಳಗಾಗುತ್ತಿದ್ದಾರೆ. ಮಕ್ಕಳು ದೈನಂದಿನ ಶಾಲಾ ವೇಳೆಯಲ್ಲಿ ಕ್ಷುಲ್ಲಕ ತಪ್ಪುಗಳನ್ನು ಮಾಡಿದಾಗ ಶಾಲೆಯಿಂದ ಹೊರಹಾಕುವ,ದೈಹಿಕವಾಗಿ ಥಳಿಸುವ ಶಿಕ್ಷೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಅನೇಕ ಮಕ್ಕಳು ಸಾವಿಗೆ ಶರಣಾಗಿರುತ್ತಾರೆ,ಇನ್ನೂ ಅನೇಕ ಮಕ್ಕಳು ಶಾಲೆಯಿಂದ ಹೊರಗೆ ಉಳಿಯಲು ಸಹ ಕಾರಣವಾಗುತ್ತಿದೆ. "1992 ರಲ್ಲಿ ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯು ಅಂತರಾಷ್ಟ್ರೀಯ ಕಾನೂನನ್ನು ಜಾರಿಗೆ ತಂದಿದ್ದು ಅದರಲ್ಲಿ ಮಕ್ಕಳ ರಕ್ಷಣೆ ಬಗ್ಗೆ ಒತ್ತು ನೀಡಲಾಗಿದ್ದರೂ ಕೂಡ ಮಕ್ಕಳ ಮೇಲಿನ ದೌರ್ಜನ್ಯ ಇನ್ನೂ ಕಡಿಮೆಯಾಗಿಲ್ಲ".

ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣೆಗಾಗಿ ಕರ್ತವ್ಯ ನಿರ್ವಹಿಸುತ್ತಿರುವ ಚೈಲ್ಡ್ ಲೈನ್ 1098 ಕುರಿತು ಸಾರ್ವಜನಿಕರು/ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿರುತ್ತದೆ. ಈ ಸಂಬಂಧ ಚೈಲ್ಡ್ ಲೈನ್ 1098 ಈ ದೂರವಾಣಿ ಸಂಖ್ಯೆಯು ರಾಷ್ಟ್ರೀಯ ತುರ್ತು ದೂರವಾಣಿ ಸಂಖ್ಯೆ ಆಗಿದ್ದು ಮಕ್ಕಳ ಸಹಾಯಕ್ಕಾಗಿ ದಿನದ 24 ಗಂಟೆಗಳಲ್ಲಿಯೂ ಚಾಲ್ತಿಯಲ್ಲಿರುತ್ತದೆ. ಇದು ಭಾರತ ಸರ್ಕಾರದ ಪ್ರಮುಖ ಯೋಜನೆ ಯಾಗಿದ್ದು ಈ ಯೋಜನೆಯ ಬಗ್ಗೆ ತಿಳುವಳಿಕೆಯನ್ನು ಮೂಡಿಸಬೇಕಾಗಿರುವುದು ಅಗತ್ಯವಾಗಿರುತ್ತದೆ. ಮಕ್ಕಳ ರಕ್ಷಣೆಯ ಸೂಕ್ತ ಮಾಹಿತಿಗಾಗಿ **"ಚೈಲ್ಡ್ ಲೈನ್ 1098 ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ರಾಜ್ಯದ ಎಲ್ಲಾ ಶಾಲೆಗಳ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳು/ಪೋಷಕರು/ಸಾರ್ವಜನಿಕರಿಗೆ ತಿಳಿಸುವಂತೆ ಅಗತ್ಯ ಕ್ರಮಕೈಗೊಳ್ಳಲು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ(ಆಡಳಿತ) ಈ ಮೂಲಕ ತಿಳಿಸಿದೆ."**

(ಎಸ್.ಆರ್. ಉಮಾಶಂಕರ್)
ಆಯುಕ್ತರು

**ಪ್ರತಿ ಮಾಹಿತಿ** ಗೌರವಗಳೊಂದಿಗೆ,

1.ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು

2.ಅಪರ ಆಯುಕ್ತರು ಗುಲ್ಬರ್ಗಾ/ಧಾರವಾಡ

3.ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರ ಮುಖಾಂತರ

4.ನಾಗಮಣಿ.ಸಿ.ಎನ್. ನಗರ ಸಂಘಟಕರು ಚೈಲ್ಡ್ ಲೈನ್ ಬೆಂಗಳೂರು

5.ಕಛೇರಿ ಪ್ರತಿ.

Generated by CamScanner from intsig.com